ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ, ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 23 – 01 –2025ರ ನಡವಳಿಗಳು

ವಿಷಯದ ಸಂಖ್ಯೆ: 233/2025-26

ಪ್ರಸ್ತಾವನೆ:

ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2024–25ನೇ ಸಾಲಿನ ಆಯವ್ಯಯ ಸಂಕೇತ: 05–330502 (ಹಿಂದುಳಿದ ವರ್ಗದವರ ಕಲ್ಯಾಣ ನಿಧಿ ಕಾಮಗಾರಿಗಳು ಮೂಲಭೂತ ಸೌಕರ್ಯ ಅಭಿವೃದ್ಧಿ ಅನುದಾನ) ಪಿ–2337 & ಪಿ–3863 ಅನುದಾನದಡಿ Improvements of roads and drains C.P layout and Devinagar and surroundings area in ward no.11, Kodigehalli, Kodigehalli sub division ಕಾಮಗಾರಿಯನ್ನು ಅಂದಾಜು ಮೊತ್ತ ರೂ.125.00ಲಕ್ಷಗಳಲ್ಲಿ ಕೈಗೊಳ್ಳಲು (ವಿಷಯ ಸಂಖ್ಯೆ:456/24–25 ದಿನಾಂಕ:31–01–2025)ಅನುದಾನ ಮಂಜೂರಾಗಿರುತ್ತದೆ.

ಮುಂದುವರೆದು, 2023–24ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಗಳನ್ವಯ ಹಾಗೂ ಅನುಮೋದಿತ ದರಪಟ್ಟಿಯಂತೆ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಹಾಗೂ ಮಾನ್ಯ ಮುಖ್ಯ ಆಯುಕ್ತರು ಪಾಲಿಕೆಯ ಅನುದಾನದಡಿಯಲ್ಲಿ ಕೈಗೊಳ್ಳುವ ಎಲ್ಲಾ ಕಾಮಗಾರಿಗಳಿಗೆ ಅಂದಾಜು ಪಟ್ಟಿಯಲ್ಲಿಯೇ ಟೆಂಡರ್ ಪ್ರೀಮಿಯಂನ್ನು ಅಳವಡಿಸಿಕೊಳ್ಳಲು ಸೂಚಿಸಿರುವ ಹಿನ್ನೆಲೆಯಲ್ಲಿ ಅಂದಾಜು ಪಟ್ಟಿಯಲ್ಲಿ ಶೇ. 5ರಷ್ಟು ಟೆಂಡರ್ ಪ್ರೀಮಿಯಂನ್ನು ಅಳವಡಿಸಿಕೊಳ್ಳಲಾಗಿತ್ತದೆ.

ಸದರಿ ಕಾಮಗಾರಿಯನ್ನು ಸಾರ್ವಜನಿಕ ಸೇವಾ ಹಿತದೃಷ್ಟಿಯಿಂದ ತುರ್ತಾಗಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮಂಜೂರಾತಿಯನ್ನು ನಿರೀಕ್ಷಿಸಿ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ರವರು ದಿನಾಂಕ:10–02–2025ರಂದು ಟೆಂಡರ್ ಆಹ್ವಾನಿಸಲಾಗಿತ್ತು.

ತಾಂತ್ರಿಕ ಬಿಡ್ ಅನ್ನು ದಿನಾಂಕ:29–03–2025ರಂದು ತೆರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿ ಮೂರು ಜನ ಬಿಡ್‌ದಾರರು ಭಾಗವಹಿಸಿದ್ದು, ಇಬ್ಬರು ಬಿಡ್‌ದಾರರು ತಾಂತ್ರಿಕವಾಗಿ ಅರ್ಹರಾಗಿರುತ್ತಾರೆ. ಸದರಿಯವರ ಆರ್ಥಿಕ ಬಿಡ್ ತೆರೆಯಲು ಮುಖ್ಯ ಅಭಿಯಂತರರು ಯಲಹಂಕ, ವಲಯರವರು ಅನುಮೋದಿಸಿರುವಂತೆ ದಿನಾಂಕ:05–06–2025ರಂದು ಆರ್ಥಿಕ ಬಿಡ್ ಅನ್ನು ತೆರೆಯಲಾಗಿದ್ದು, ವಿವರ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ತಾಂತ್ರಿಕ ಮೌಲ್ಯ ಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್ ಗಿಟ್ಟ ಮೊತ್ತ (ರೂ. ಗಳಲ್ಲಿ) (ಜಿ.ಎಸ್.ಟಿ ಹೊರತುಪಡಿಸಿ)	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂಗಳಲ್ಲಿ) (ಜಿ.ಎಸ್.ಟಿ ಹೊರತುಪಡಿಸಿ)	ಟೆಂಡರ್ ಗಿಟ್ಟ ಮೊತ್ತ ದರಗಳಿಗೆ ಹೋಲಿಸಿದಾಗ
1	ಶ್ರೀಮತಿ. ಮಮತ (ರೋಹನ್ ಕನ್ಸ್ಟ್ರಕ್ಷನ್ಸ್)	125.00	10077413.41	10580284.83	ಶೇ.(+)4.99% ರಷ್ಟು ಹೆಚ್ಚು
2	ಶ್ರೀ. ಎನ್ ಕುಮಾರ್ ರೆಡ್ಡಿ			10916714.60	ಶೇ.(+)8.33% ರಷ್ಟು ಹೆಚ್ಚು

ಬಿಡ್‌ದಾರರಾದ ಶ್ರೀಮತಿ ಮಮತ (ರೋಹನ್ ಕನ್ಸ್ಟ್ರಕ್ಷನ್ಸ್) ರವರು ಎಲ್-1 ಬಿಡ್‌ದಾರರಾಗಿರುತ್ತಾರೆ.

ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿದೆ.

1. ಪ್ರಸ್ತಾಪಿತ ಕಾಮಗಾರಿಗಳ ಸ್ಥಳ ಪರಿವೀಕ್ಷಣೆ ಮಾಡಿ ಕಾಮಗಾರಿಯ ಅವಶ್ಯಕತೆ ಬಗ್ಗೆ ಹಾಗೂ ಸದರಿ ಕಾಮಗಾರಿಯನ್ನು ಪಾಲಿಕೆಯ ಹಿಂದಿನ ಆಯವ್ಯಯಗಳಲ್ಲಿ/ ಅನುದಾನಗಳಲ್ಲಿ ಕೈಗೊಂಡಿಲ್ಲದೆ ಇರುವ ಮತ್ತು ಪುನಾರಾವರ್ತನೆಯಾಗದೇ ಇರುವುದನ್ನು ಖಚಿತ ಪಡಿಸಿಕೊಳ್ಳುವುದು.

2. ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಪೂರ್ವದಲ್ಲಿ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಲೆಅ/ಆಯವ್ಯ/2019-20/ಪಿಆರ್/11/2018-19 ದಿನಾಂಕ:12-06-2019 ಮತ್ತು ಆಯುಕ್ತರವರ ಆಂತರಿಕ ಕಛೇರಿ ಟಿಪ್ಪಣಿ ಸಂಖ್ಯೆ:ಬಿಬಿಎಂಪಿ/ಆ/ಪಿ.ಆರ್/5287/2019-20, ದಿನಾಂಕ:05-11-2019 ಮತ್ತು ಬಿಬಿಎಂಪಿ/ಪಿ/ಪಿಆರ್/ 6166/2019-20, ದಿನಾಂಕ:13-12-2019ರಲ್ಲಿನ ನಿರ್ದೇಶನಗಳನ್ನು/ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು.

3. ಕಾಮಗಾರಿ ನಿರ್ವಹಿಸುವ ಮುನ್ನ ಹಾಗೂ ನಂತರದ ಜಿಪಿಎಸ್‌ಯುಳ್ಳ ಛಾಯಾ ಚಿತ್ರಗಳನ್ನು ಸಲ್ಲಿಸತಕ್ಕದ್ದು.

ಈ ಮೇಲ್ಕಂಡ ಅಂಶಗಳ ಹಿನ್ನೆಲೆ ಅನುಮೋದನೆ ನೀಡಲು ಮಂಡಿಸಲಾದ ಟಿಪ್ಪಣಿ.

1. ಕಾಮಗಾರಿಯ ಮೊತ್ತ ರೂ.125.00ಲಕ್ಷಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಆಹ್ವಾನಿಸಲಾಗಿರುವುದರಿಂದ ಘಟನ್ನೋತ್ತರ ಆಡಳಿತಾತ್ಮಕ ಅನುಮೋದನೆ.

2. ಸದರಿ ಕಾಮಗಾರಿಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಗುತ್ತಿಗೆದಾರರಾದ ಶ್ರೀಮತಿ. ಮಮತ (ರೋಹನ್ ಕನ್ಸ್ಟ್ರಕ್ಷನ್ಸ್) ರವರು ನಮೂದಿಸಿರುವ ಟೆಂಡರ್‌ಗಿಟ್ಟ ಮೊತ್ತಕ್ಕೆ ಶೇ. 4.99ರಷ್ಟು ಹೆಚ್ಚು

ಮೊತ್ತ ರೂ.1,05,80,284.83(ರೂಪಾಯಿ ಒಂದು ಕೋಟಿ ಐದು ಲಕ್ಷದ ಎಂಭತ್ತು ಸಾವಿರದ ಎರಡು ನೂರ ಎಂಭತ್ತಾ ನಾಲ್ಕು & ಪೈಸೆ ಎಂಭತ್ತಾ ಮೂರು ಮಾತ್ರ)ಗಳಿಗೆ (ಜಿ.ಎಸ್.ಟಿ. ಹೊರತುಪಡಿಸಿ) ಟೆಂಡರ್ ಅನುಮೋದನೆ ಕೋರಿ ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಆಡಳಿತಗಾರರ ಮುಂದೆ ಮಂಡಿಸಿರುವ ವಲಯ ಆಯುಕ್ತರು (ಯಲಹಂಕ) ರವರ ಕಛೇರಿ ಸಂಖ್ಯೆ:ವ.ಆ/ಯ.ವ/ಪಿ.ಆರ್/221/2025–26 ದಿನಾಂಕ:17–07–2025ರ ಟಿಪ್ಪಣಿ.

ವಿಷಯ ಸಂಖ್ಯೆ:233/2025–26

ತೀರ್ಮಾನ: ವಲಯ ಆಯುಕ್ತರು (ಯಲಹಂಕ) ರವರು ಮಂಡಿಸಿರುವ ಸಂಖ್ಯೆ: ವ.ಆ/ಯ.ವ/ಪಿ.ಆರ್/221/2025–26 ದಿನಾಂಕ:17–07–2025ರ ಟಿಪ್ಪಣಿಯನ್ನು ಒಪ್ಪಿದೆ.

(ತುಷಾರ್ ಗಿರಿ ನಾಥ್)
ಆಡಳಿತಗಾರರು